- 16 -
ಕ್ರಿಮಿನಲ್ ಪ್ರಕರಣ ಸಂಖ್ಯೆ : 3750/2023
ಪಿ..ಡಬ್ಲ್ಯೂ -01

**ದಿನಾಂಕಃ 30-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**
**ಪಾಟೀಸವಾಲು :- ಆರೋಪಿಯ ಪರ ಶ್ರೀ. ಬಿ ಎಂ ಪಿ ವಕೀಲರಿಂದ :-**

ನಿಪಿ-8ರ ಕರಾರುಪತ್ರದ ಸ್ಟಾಂಪ್ ಪೇಪರ್ ಅನ್ನು ಎಲ್ಲಿ ಹಾಗೂ ಎಷ್ಟು ರೂಪಾಯಿಗಳಿಗೆ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಾಗಡಿಯಲ್ಲಿ ಖರೀದಿ ಮಾಡಿದ್ದು ಆದರೆ ಎಷ್ಟು ರೂಪಾಯಿಯ ಸ್ಟಾಂಪ್ ಪೇಪರ್ ಎಂದು ನೆನಪು ಇರುವುದಿಲ್ಲ. ಸದರಿ ಸ್ಟಾಂಪ್ ಪೇಪರ್ ತರಲುನೀವು ಹೋಗಿರುತ್ತೀರೋ ಅಥವಾನಿಮ್ಮ ತಂದೆಯವರು ಹೋಗಿರುತ್ತಾರೋ ಎಂದರೆ ಸಾಕ್ಷಿ ಸುಮಾರು 3-4 ವರ್ಷ ಆದ್ದರಿಂದ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸ್ಟಾಂಪ್ ಪೇಪರ್ ಪಡೆಯಲು ಹಣವನ್ನು ಯಾರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆಯವರು ಕೊಟ್ಟಿರುತ್ತಾರೋ ಅಥವಾ ನಾನು ಕೊಟ್ಟಿರುತ್ತೇನೋ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ.

ಹಿಂದಿನ ಪಾಟೀಸವಾಲಿನಲ್ಲಿ ನಿಪಿ-8ರ ಕರಾರುಪತ್ರವನ್ನು ಬೆಂಗಳೂರಿನ ರಾರಾಜಿನಗರದಲ್ಲಿರುವ ವಕೀಲರ ಕಛೇರಿಯಲ್ಲಿ ಟೈಪ್ ಮಾಡಿಸಿರುತ್ತೀರಿ ಎಂದು ಹೇಳಿದ್ದು ಆಗ ಯಾರು ಯಾರು ಹಾಜರು ಇದ್ದರು ಎಂದರೆ ಸಾಕ್ಷಿ ಚನ್ನರಾಯಪ್ಪ ಮತ್ತು ಯತೀಶ್ ಎಂದು ನುಡಿಯುತ್ತಾರೆ. ಬೇರೆ ಯಾರು ಯಾರು ಇದ್ದರು ಎಂದರೆ ಸಾಕ್ಷಿ ಆರೋಪಿಗಳು ಮತ್ತು 2ನೇ ಆರೋಪಿಯ ತಂದೆ ಇದ್ದರು ಎಂದು ನುಡಿಯುತ್ತಾರೆ. ಸದರಿ ನಿಪಿ-8 ಟೈಪ್ ಆಗುವಾಗ ಆರೋಪಿಗಳು ಮತ್ತು 2 ನೇ ಆರೋಪಿಯ ತಂದೆ ಇದ್ದಿರಲಿಲ್ಲ ಎಂದರೆ ಸಾಕ್ಷಿ ಇದ್ದರು ಎಂದು ನುಡಿಯುತ್ತಾರೆ. ನಿಪಿ-8 ರ ಪ್ರತಿ ಪುಟದಲ್ಲೂ ಪೆನ್ಸಿಲ್ ನಿಂದ 1.P, 2.V and (N)1ಮತ್ತು ( S) 2 ಎಂದು ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ರೀತಿ ಪೆನ್ಸಿಲ್ ನಲ್ಲಿ ಬರೆಯಲು ಕಾರಣ ಏನು ಎಂದರೆ ಸಾಕ್ಷಿ ಅವರವರ ಸಹಿ ಹಾಕಿಸಲು ಎಂದು ನುಡಿಯುತ್ತಾರೆ. ಸದರಿ ನಿಪಿ-8 ರಲ್ಲಿ ಖಾಲಿ ಹಾಳೆಯಲ್ಲಿ ಸಹಿ ಪಡೆಯಲು ನಿಮ್ಮ ವಕೀಲರು ಪೆನ್ಸಿಲ್ ನಿಂದ ಆ ರೀತಿ ಗುರುತು ಹಾಕಿದ್ದು ನಂತರ ಸದರಿ ನಿಪಿ-8 ಅನ್ನು ಟೈಪ್ ಮಾಡಿಸಿರುತ್ತೀರಿ ಎಂದರೆ ಸಾಕ್ಷಿ ಆರೋಪಿಗಳು ಓದಿ ತಿಳಿದುಕೊಂಡೆ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ರೀತಿ ಸಾಕ್ಷಿಗಳ ರುಜುವಿಗೂ ಪೆನ್ಸಿಲ್ ನಿಂದ ಗುರುತು ಮಾಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಯಾವ ಕಾರಣಕ್ಕಾಗಿ ಸಾಕ್ಷಿಗಳ ಸಹಿ ಗುರುತು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ಸಾಕ್ಷಿಗಳು ಇದ್ದರು ಆಗ ವಕೀಲರು ಅವರ ಸಹಿ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನೀವಾಗಲಿ ನಿಮ್ಮ ತಂದೆಯಾಗಲಿ ಹಾಗೂ ಆರೋಪಿಗಳಾಗಲಿ ಅಲ್ಲಿ ಇದ್ದಿರಲಿಲ್ಲ ಆ ಕಾರಣದಿಂದ ವಕೀಲರು ನಿಮ್ಮ, ನಿಮ್ಮ ತಂದೆ ಮತ್ತು ಆರೋಪಿಗಳ ಸಹಿಯನ್ನು ಪಡೆದಿರುವುದಿಲ್ಲ ಪೆನ್ಸಿಲ್ ನಿಂದ ಗುರುತು ಹಾಕಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನನ್ನ ತಂದೆಯವರು ಮನೆಯಲ್ಲಿ ಇದ್ದ ಕಾರಣ ನಾನೆ ಹೋಗಿ ಸಹಿ ಹಾಕಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ನಿಪಿ-8 ಕ್ಕೆ ನಿಮ್ಮ ತಂದೆಯವರನ್ನು ಹೊರತು ಪಡಿಸಿ ಎಲ್ಲರೂ ಬೆಂಗಳೂರಿನಲ್ಲಿ ಸಹಿ ಮಾಡಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದೇ ರೀತಿ ನೀವು ನಿಪಿ-8ರ ಸ್ಟಾಂಪ್ ಪೇಪರ್ ಅನ್ನು ಮಾಗಡಿಯಲ್ಲಿ ಖರೀದಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ನಿಪಿ-8 ರಲ್ಲಿ ಸದರಿ ಕರಾರುಪತ್ರವನ್ನು ದಿನಾಂಕ 21.07.2022 ರಂದು ಮಾಗಡಿಯಲ್ಲಿ ಮಾಡಿರುತ್ತದೆ ಎಂದು ಬರೆದಿದ್ದು ಏಕೆ ಆ ರೀತಿ ಸುಳ್ಳು ಬರೆಸಿರುತ್ತೀರಿ ಎಂದರೆ ಸಾಕ್ಷಿ ನಾವು ಸ್ಥಳೀಯವಾಗಿ ಮಾಗಡಿ ತಾಲ್ಲೂಕಿನವರು ಆಗಿರುವುದರಿಂದ ಮಾಗಡಿ ಎಂದು ಬರೆದಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿಗಳ ವಿರುದ್ದ ಸುಳ್ಳು ದೂರನ್ನು ಸಲ್ಲಿಸುವುದಕ್ಕೋಸ್ಕರ ಸದರಿ ನಿಪಿ-8 ರಲ್ಲಿ ಸುಳ್ಳು ಅಂಶಗಳನ್ನು ಬರೆದಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯವರಿಂದ ದಿನಾಂಕ 22.10.2011ರ ಕ್ರಯಪತ್ರವನ್ನು ಬಲವಂತವಾಗಿ ಪಡೆದಿರುತ್ತೀರಿ ಎಂದರೆ ಸಾಕ್ಷಿ ಅವರೆ ಅವರ ಮತ್ತು ಅವರ ಹೆಂಡತಿಯ ಚೆಕ್ ಹಾಗೂ ಕ್ರಯಪತ್ರವನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 1ನೇ ಆರೋಪಿಗೆ ಹಣ ಕೊಡದೆ ಇದ್ದರೂ ಅವರ ಕ್ರಯಪತ್ರವನ್ನು ಏಕೆ ಪಡೆದಿರುತ್ತೀರಿ ಎಂದರೆ ಸಾಕ್ಷಿಯು ಗ್ಯಾರಂಟಿಗೋಸ್ಕರ ಪಡೆದಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಮೂಲ ಕ್ರಯಪತ್ರ ನಿಮ್ಮ ಬಳಿಯೇ ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಮೈಸೂರು ಆಸ್ತಿಯ ಕ್ರಯಪತ್ರದ ಆಧಾರದ ಮೇಲೆ ಅಡಮಾನಪತ್ರ ಮಾಡಿ ಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಕಾನೂನು ಬಾಹಿರವಾಗಿ ಸದರಿ ಕ್ರಯಪತ್ರವನ್ನು ನಿಮ್ಮ ಬಳಿ ಇಟ್ಟುಕೊಂಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ವಿಶ್ವಾಸದಲ್ಲಿ ಹಣ ಕೇಳಿದ್ದರು ಆಗ ಗ್ಯಾರಂಟಿಗಾಗಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ-9 ರಿಂದ 11ರ ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ಯಾವ ಉದ್ದೇಶಕ್ಕೆ ಹಾಜರು ಪಡಿಸಿರುತ್ತೀರಿ ಎಂದರೆ ಸಾಕ್ಷಿ ಅಷ್ಟು ಹಣ ಕೊಡಲು ನಿಮ್ಮ ಬಳಿ ಇತ್ತ ಎಂದು ನೀವು ಕೇಳಿದ್ದರಿಂದ ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ನಿಪಿ-9 ರಿಂದ 11ರ ಸ್ಟೇಟ್ ಮೆಂಟ್ ನಲ್ಲಿ ಆರೋಪಿಗಳಿಗೆ ಹಣ ಕೊಟ್ಟ ಬಗ್ಗೆ ದಾಖಲೆ ಇದೆಯೆ ಎಂದರೆ ಸಾಕ್ಷಿ ಯಾವುದೋ ಒಂದು ಇರಬಹುದು ಎಂದು ನುಡಿಯುತ್ತಾರೆ. ಸಾಕ್ಷಿಗೆ ಸದರಿ ದಾಖಲೆಗಳನ್ನು ತೋರಿಸಲಾಗಿ ಎಲ್ಲಿ ಇರುತ್ತದೆ ಎಂದರೆ ಸಾಕ್ಷಿ ಹುಡುಕಲು ಆಗುವುದಿಲ್ಲ ಎಂದು ನುಡಿಯುುತ್ತಾರೆ. ಸದರಿ ನಿಪಿ-9 ರಿಂದ 11ರ ದಾಖಲೆಗಳಲ್ಲಿ ಆರೋಪಿಗಳಿಗೆ ಹಣ ಸಂದಾಯ ಆದ ಬಗ್ಗೆ ಯಾವುದೇ ನಮೂದು ಇರದ ಕಾರಣ ಹುಡುಕಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-14ರ ದಾಖಲೆಯು 2 ನೇ ಆರೋಪಿಯು ನಿಮ್ಮ ವಿರುದ್ದ ಕೊಟ್ಟಂತಹ ದೂರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದೂರಿನಲ್ಲಿ ಹಣಕಾಸಿನ ವ್ಯವಹಾರದ ಬಗ್ಗೆ ಅಲ್ಲ, ನೀವು 2 ನೇ ಆರೋಪಿಯ ತಾಯಿಯವರ ಜೊತೆ ದುರ್ವರ್ತನೆ ತೋರಿಸಿದ ಬಗ್ಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಪಿ-15 ರಲ್ಲಿ ನೀವು ಆರೋಪಿಗಳು ನನಗೆ ದುಡ್ಡು ಕೊಡಬೇಕು ಎಂದು ಹೇಳಿದ್ದು ಆದರೆ ಆರೋಪಿಗಳು ನಿಮಗೆ ಹಣ ಕೊಡಬೇಕು ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 2 ನೇ ಆರೋಪಿಯು ಕೊಟ್ಟಿರುವ ದೂರಿನಿಂದ ತಪ್ಪಿಸಿ ಕೊಳ್ಳಲು ನೀವು ಆ ರೀತಿ ಸುಳ್ಳು ಹೇಳಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ನಿಪಿ-14 ಮತ್ತು 15 ರಲ್ಲಿ ಹಣ ಪಡೆದ ಬಗ್ಗೆ ಅಥವಾ ಹಣ ಕೊಟ್ಟ ಬಗ್ಗೆ ಎಲ್ಲಿಯೂ ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಗಳಿಗೆ ತೊಂದರೆ ಕೊಡಲು ಸುಳ್ಳು ದೂರನ್ನು ಸಲ್ಲಿಸಿದ್ದು ಆರೋಪಿಪಗಳಿಂದ ನೀವು ಕೇಳಿದಷ್ಟು ಹಣ ಬರಬೇಕಾಗಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,

ಪ್ರ. ನ್ಯಾ . ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.